# KARNATAKA LOKAYUKTA

NO:UPLOK-1/DE/440/2015/ARE-9

M.S. Building,
Dr. B.R. Ambedkar Veedhi,
Bengaluru - 560 001.
Date: 05-12-2017

## : : ENQUIRY REPORT : :

**:: Present ::**

**( Lokappa N.R )**
Additional Registrar of Enqiuries-9
Karnataka Lokayukta,
Bangalore

Sub: Departmental Enquiry against Sri D. Krishnaraj, Assistant Executive, Karnataka Rural Infrastructure Development Limited, Raichur -reg.

Ref: 1) Government Order No ಕೆಆರ್‌ಐಡಿಎಲ್/ಆಡಳಿತ/ಸಿಆರ್-ಜಿನ್ನಾಪುರ- ಗಲಗಾ ಕೆರೆಗಳು/2015-16 ದಿ: 25/8/2015.

2) Nomination Order No: UPLOK-1/DE/ 440/2015, Bangalore dated 02/09/2015 of Hon'ble Upalokayukta,

* ** *** @ *** *** *

This Departmental Enquiry is initiated against Sri D. Krishnaraj, Assistant Executive, Karnataka Rural Infrastructure Development Limited, Raichur (hereinafter referred to as the "Delinquent Government Officials" in short "**DGO**").

2) In view of the Government Order cited above at reference No.1 and Hon'ble Upalokayukta-1 vide order dated 02/09/2015 cited at reference No.2 has Nominated Addl.Registrar of Enquiries-5 to frame the charges and to conduct the enquiry against the aforesaid DGO. Addl. Registrar of Enquiries-5 has prepared Articles of charges, Statement of Imputation of Misconduct, list of witnesses

proposed to be examined in support of the charges and list of documents proposed to bc relied on in support of the charges. The copies of the same were issued to DGOs calling upon him to appear before the Enquiry Officer and to submit his written statement of defence.

Later vide Order No. Uplok-1/DE/2016 Bangalore, dated: 3.8.2016 of Hon'ble Upalokayukta-1 this file has been transferred to ARE-9.

The Article of charges framed by the ARE-5 against the DGOs is as under :

**ANNEXURE-I**
**CHARGE**

2. ಅ.ಸ.ನೌ. ಆದ ನೀವು ಡಿ.ಕೃಷ್ಣರಾಜ್ 2007ನೇ ಇಸವಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಯಚೂರು ಜಿಲ್ಲೆಯ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತ ರಾಯಚೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದೂರುದಾರರಾದ ಶ್ರೀ ಮಲ್ಲಿಕಾರ್ಜುನ ಪೊಲೀಸ್ ಪಾಟೀಲ ಜಿನ್ನಾಪುರ ಗ್ರಾಮ ದೇವದುರ್ಗ ತಾಲ್ಲೂಕು ರಾಯಚೂರು ಜಿಲ್ಲೆ ಇವರು ನಿಮ್ಮ ಹಾಗೂ ಶ್ರೀ ಬಸವರಾಜ ವೀರಪ್ಪ ಚಿಕ್ಕನರಗುಂದ ಉಪನಿರ್ದೇಶಕರು ರಾಯಚೂರು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತ (2ನೇ ಎದುರುದಾರರು) ಇವರ ವಿರುದ್ಧ ದೂರು ಸಲ್ಲಿಸಿ ಆ ದೂರಿನಲ್ಲಿ, ನೀವು ಹಾಗೂ 2ನೇ ಎದುರುದಾರರು 2007ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆ ಪುನಶ್ಚೇತನ ಕಾಮಗಾರಿಗಳ ಅನುಷ್ಠಾನ, ದೇವದುರ್ಗ ತಾಲ್ಲೂಕ್ ಜಿನ್ನಾಪುರ ಕೆರೆಯನ್ನು ರೂ.30.00 ಲಕ್ಷಗಳ ಖರ್ಚಿನಲ್ಲಿ, ಗಲಗಾ ಗ್ರಾಮದ ಕೆರೆಯನ್ನು ರೂ.45.00 ಲಕ್ಷಗಳ ಖರ್ಚಿನಲ್ಲಿ ಅಭಿವೃದ್ಧಿಗೊಳಿಸಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿದ್ದು, ಆದರೆ, ಆ ಎರಡೂ ಕೆರೆಗಳು ನಾರಾಯಣಪುರ

ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿದ್ದು, 4–5 ವರ್ಷಗಳಿಂದ ಈ ಎರಡೂ ಕೆರೆಗಳು ಬಸಿ ನೀರಿನಿಂದ ಸಂಪೂರ್ಣ ಭರ್ತಿಯಾಗಿದ್ದು, ಕೆರೆಗಳ ಪೂರ್ಣಮಟ್ಟದವರೆಗೆ ನೀರು ತುಂಬಿರುವುದರಿಂದ, ಇಲ್ಲಿ ಯಾವುದೇ ಕೆಲಸಗಳನ್ನು ಮಾಡುವುದು ಕಲ್ಪನೆಗೆ ಮೀರಿದ್ದಾಗಿದ್ದು, ಅವರು ಸ್ಥಳೀಯರಾಗಿದ್ದು ಯಾವುದೇ ಕೆರೆ ಅಭಿವೃದ್ಧಿ ಕೆಲಸಗಳಾಗಲೀ, ಚಟುವಟಿಕೆಗಳಾಗಲೀ ಕಂಡುಬಂದಿಲ್ಲವೆಂದು ನಿಮ್ಮ ಹಾಗೂ 2ನೇ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಮೇಲ್ಕಂಡ ದೂರಿನ ಮೇಲೆ ತನಿಖೆ ಮಾಡಿ ವರದಿ ನೀಡಲು ದೂರನ್ನು ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಕಳಿಸಿದ್ದು, ಅವರು ತಾಂತ್ರಿಕ ವಿಭಾಗದ ಸಹಾಯಕ ಅಭಿಯಂತರರು–1 ರವರಿಗೆ ತನಿಖೆಗಾಗಿ ಕಳಿಸಿದ್ದು, ತನಿಖಾಧಿಕಾರಿಗಳು ದಿನಾಂಕ 06.07.2012ರಂದು ಸ್ಥಳ ಪರಿಶೀಲನೆ ಮಾಡಿ, ದೂರುದಾರರ ಮೇಲಿನ ಆಪಾದನೆ ಸಾಬೀತಾಗಿಲ್ಲವೆಂದು, ದಿನಾಂಕ 11.02.2013ರಂದು ಎರಡೂ ಕೆರೆಗಳ ಬಗ್ಗೆ ಪ್ರಶ್ನಿತ ದೂರು ದಾಖಲಾಗಿದ್ದರೂ ಸಹ ಒಂದೇ ತನಿಖೆಯನ್ನಾಧರಿಸಿ ಕಂಪ್ಲೆಂಟ್/ಲೋಕ್/ಜಿಎಲ್‌ಬಿ–46/2010 ಮತ್ತು ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ–27/2011ರಲ್ಲಿ ಪ್ರತ್ಯೇಕ ವರದಿ ನೀಡಿರುತ್ತಾರೆ. ನಂತರ ಈ ನಕರಾತ್ಮಕ ತನಿಖಾ ವರದಿಯನ್ನು ದೂರುದಾರರಿಗೆ ಕಳಿಸಿ, ಅವರ ಪ್ರತ್ಯುತ್ತರ ಕೇಳಲಾಗಿ, ಅವರು ಸದರಿ ಕೆರೆಗಳು ಸತತ 8 ವರ್ಷಗಳಿಂದ ಕೃಷ್ಣಾ ಬಲದಂಡೆ ಕಾಲುವೆ ಬಸಿ ನೀರಿನಿಂದ ತುಂಬಿದ್ದು, ಯಾವುದೇ ಕಾಮಗಾರಿ ನಿರ್ವಹಿಸಿಲ್ಲವೆಂತಲೂ, ತನಿಖಾಧಿಕಾರಿಗಳಿಗೆ ಗ್ರಾಮಸ್ಥರಾದ ಶ್ರೀ ಶಿವಣ್ಣ ತಂದೆ ಬಸಣ್ಣ, ಶ್ರೀ ಹೊನ್ನಪ್ಪಗೌಡ ತಂದೆ ಸಿದ್ರಾಮಣ್ಣ ಮತ್ತು ಖಾಜಾಹುಸೇನ್ ಸರಿಯಾದ ಮಾಹಿತಿ ನೀಡದೇ, ತಪ್ಪು ಮಾಹಿತಿ ನೀಡಿ ಅವರ ಹೇಳಿಕೆ ಪಡೆದಿರುತ್ತಾರೆಂದು ಪುನ: ಅವರು ನೀಡಿದ ಜಂಟಿ ಹೇಳಿಕೆಯೊಂದಿಗೆ ಪ್ರತ್ಯುತ್ತರ ನೀಡಿರುತ್ತಾರೆ. ಈ ಕಡತದಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

(i) ರಾಯಚೂರು ಜಿಲ್ಲಾ ಪಂಚಾಯಿತಿಯು ದಿನಾಂಕ 02.07.2009ರರ ಆದೇಶ ಸಂಖ್ಯೆ: ಜಿಪಂರಾ/ಸ.ಕೆರೆ/ಆಮಂ/2009–10ರನ್ವಯ 2008–09ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ದೇವದುರ್ಗ

ತಾಲ್ಲೂಕಿನ ಗಲಗ ಕೆರೆ ಅಭಿವೃದ್ಧಿಗೆ ರೂ.30+15=45 ಲಕ್ಷಗಳನ್ನು, ಜಿನ್ನಾಪುರ ಕೆರೆ ಅಭಿವೃದ್ಧಿಗೆ ರೂ.30.00 ಲಕ್ಷವನ್ನು ಖರ್ಚು ಮಾಡಲು ಅನುಮೋದನೆ ನೀಡಿರುತ್ತದೆ.

(ii) ಮೇಲೆ ಹೇಳಿದ ಆದೇಶಾನುಸಾರ ಗಲಗ ಅಭಿವೃದ್ಧಿ ಕೆರೆಗೆ ಕೆ.ಆರ್.ಐ.ಡಿ.ಎಲ್. ರವರು ರೂ.30+15 ಲಕ್ಷಗಳಿಗೆ ಭಾಗ-1 ಮತ್ತು ಭಾಗ-2 ಎಂದು, ಅನುಮೋದನೆಯ ಅಧಿಕಾರವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವ್ಯಾಪ್ತಿಗೆ ಪಡೆಯುವ ಒಂದೇ ಹೂಳೆತ್ತುವ ಕಾಮಗಾರಿಗಳಿಗೆ 2 ಅಂದಾಜು ಪತ್ರಿಕೆ ತಯಾರಿಸಿ ಅನುಮತಿ ಪಡೆದು, ಜಿನ್ನಾಪುರ ಕೆರೆ ಹೂಳೆತ್ತಲು ರೂ.30.00 ಲಕ್ಷಗಳ ಅಂದಾಜು ಪಟ್ಟಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದಿರುತ್ತಾರೆ.

(iii) ರಾಯಚೂರು ಜಿಲ್ಲಾ ಪಂಚಾಯತ್ ದಿನಾಂಕ 02.07.2009ರ ಆದೇಶಾನುಸಾರ ಅನುದಾನ ಬಿಡುಗಡೆ ಮಾಡಿದ್ದು, ಕರ್ನಾಟಕ ಸರ್ಕಾರವು ಸಂಖ್ಯೆ: ಗ್ರಾಅಪ:45: ಕೆರೆಗಳು:2009, ದಿನಾಂಕ 27.11.2009ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು ರವರಿಗೆ ಪತ್ರ ಬರೆದು ಕಾಮಗಾರಿಯನ್ನು ಅಂದಿನ ಕರ್ನಾಟಕ ಭೂಸೇನಾ ನಿಗಮಕ್ಕೆ (ಈಗಿನ ಕೆ.ಆರ್.ಐ.ಡಿ.ಎಲ್.) ನೇರವಾಗಿ ವಹಿಸಲು ಆದೇಶಿಸಿದೆ.

(iv) ಎದುರುದಾರರು ಕಾಮಗಾರಿಯನ್ನೇ ಮಾಡದೇ ರೂ.75.00 ಲಕ್ಷಗಳನ್ನು ಎತ್ತುವಳಿ ಮಾಡಿ ನಿರ್ದಿಷ್ಟವಾಗಿ ಯಾವ ದಿನಾಂಕದಂದು ಕಾಮಗಾರಿಯನ್ನು ಆರಂಭಿಸಿ, ಯಾವ ದಿನಾಂಕದಂದು ಮುಕ್ತಾಯಗೊಳಿಸಲಾಯಿತೆಂದು ಮಾಹಿತಿ ನೀಡದೇ, ತನಿಖಾ ವರದಿಯಲ್ಲಿರುವಂತೆ ಕಾಮಗಾರಿಯ ನಂತರ ಕೆರೆಗಳಲ್ಲಿ ಸತತವಾಗಿ ಮೂರು ವರ್ಷ ನೀರು ತುಂಬಿದ್ದು, ಪುನ: ಹೂಳು ತುಂಬಿಕೊಂಡಿದೆ ಎಂದು, ಮಾಹಿತಿ ಹಕ್ಕಿನಡಿ ದೂರುದಾರರಿಗೆ ನೀಡಿದ ಮಾಹಿತಿಗೆ ವಿರುದ್ಧವಾಗಿ ಸುಳ್ಳು ಪ್ರತಿಪಾದನೆ ಮಾಡಿದ್ದಾರೆ.

(v) ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ನೀವು ಹಾಗೂ 2ನೇ ಎದುರುದಾರರು ಹೇಳುವಂತೆ ದೇವದುರ್ಗ ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗಳು 2007ರಿಂದ 2010ರವರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಸಿ ನೀರಿನಿಂದ ತುಂಬಿಕೊಂಡಿದ್ದು, ಅವುಗಳ ಹೂಳು ತೆಗೆಯುವುದು ಸಾಧ್ಯವಿಲ್ಲವೆಂದು ಗೊತ್ತಿದ್ದೂ ಸಹ 1ನೇ ಎದುರುದಾರರು(ಅ.ಸ.ನೌ.) ಗಲಗ ಕೆರೆಯ ಹೂಳೆತ್ತಲು ನಿಯಮಬಾಹಿರವಾಗಿ ಗಲಗ ಕೆರೆಯ ಹೂಳೆತ್ತುವ ಕಾಮಗಾರಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತೆ ರೂ.30+15 ಲಕ್ಷ ರೂಪಾಯಿಗಳಿಗೆ 2 ಅಂದಾಜು ಪಟ್ಟಿಗಳನ್ನು ತಯಾರಿಸಿ, ಅನುಮೋದನೆ ಪಡೆದು, ಯಾವುದೇ ಹೂಳು ತೆಗೆಸದೆ ಸರ್ಕಾರಕ್ಕೆ ರೂ.75.00 ಲಕ್ಷಗಳ ವ್ಯರ್ಥ ವೆಚ್ಚ ಪಡಿಸಿರುತ್ತೀರಿ.

(vi) ರಾಯಚೂರು ಉಪವಿಭಾಗದ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದೂರುದಾರರಿಗೆ ಮಾಹಿತಿ ಹಕ್ಕಿನಡಿ ನೀಡಿದ ದಿನಾಂಕ 25.06.2010ರ ಮಾಹಿತಿಯ ಪ್ರಕಾರ ದೇವದುರ್ಗ

ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಸಿನೀರು ಶೇಖರಣೆಯಾಗುತ್ತಿದ್ದು, ಅವು 2007–08ರಿಂದ 2009–10ರವರೆಗೆ ನೀರಿನ ಮಟ್ಟ ಮುಂದುವರಿಕೆ ಹೊಂದಿದ್ದು, ಅದರ ನೀರನ್ನು ಇದುವರೆಗೆ ತೆಗೆದು ಯಾವುದೇ ಕಾಮಗಾರಿ ನಿರ್ವಹಿಸಿಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ, ಅ.ಸ.ನೌ. ಆದ ನೀವು ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಮತ್ತು ನಿಷ್ಠೆ ಹೊಂದದೆ ಸಾರ್ವಜನಿಕ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ (3) (1)(i) ರಿಂದ (iii) ರ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುವುದರಿಂದ, ಈ ದೋಷಾರೋಪಣೆಯನ್ನು ಹೊರಿಸಲಾಗಿದೆ.

## ANNEXURE-II
## STATEMENT OF IMPUTATION OF MISCONDUCT

3. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಿನ್ನಾಪುರ ಗ್ರಾಮದ ರಹವಾಸಿ ಶ್ರೀ ಮಲ್ಲಿಕಾರ್ಜುನ ಪೋಲೀಸ್ ಪಾಟೀಲ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುವ) ರವರು ರಾಯಚೂರಿನ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತದ (ಕೆ.ಆರ್.ಐ.ಡಿ.ಎಲ್) ಸಹಾಯಕ ಕಾರ್ಯಪಾಲಕ ಇಂಜಿನಿಯರ್–ಪ್ರಸ್ತುತ ಅ.ಸ.ನೌ. ಮತ್ತು ರಾಯಚೂರು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತದ ಉಪನಿರ್ದೇಶಕರಾಗಿದ್ದ ಶ್ರೀ ಬಸವರಾಜ ವೀರಪ್ಪ ಚಿಕ್ಕನರಗುಂದ (ಇನ್ನು ಮುಂದೆ ಅನುಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಯವರ ವಿರುದ್ಧ ಈ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

4. **ದೂರಿನಂತೆ:–** ಎದುರುದಾರರು 2007ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆ ಪುನಶ್ಚೇತನ ಕಾಮಗಾರಿಗಳ ಅನುಷ್ಠಾನ, ದೇವದುರ್ಗ ತಾಲ್ಲೂಕ್ ಜಿನ್ನಾಪುರ ಕೆರೆಯನ್ನು ರೂ.30.00 ಲಕ್ಷಗಳ ಖರ್ಚಿನಲ್ಲಿ, ಗಲಗಾ ಗ್ರಾಮದ ಕೆರೆಯನ್ನು ರೂ.45.0 ಲಕ್ಷಗಳ ಖರ್ಚಿನಲ್ಲಿ ಅಭಿವೃದ್ಧಿಗೊಳಿಸಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿದ್ದು, ಆದರೆ, ಆ ಎರಡೂ ಕೆರೆಗಳು ನಾರಾಯಣಪುರ ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿದ್ದು, 4–5 ವರ್ಷಗಳಿಂದ ಈ ಎರಡೂ ಕೆರೆಗಳು ಬಸಿ ನೀರಿನಿಂದ ಸಂಪೂರ್ಣ

ಭರ್ತಿಯಾಗಿದ್ದು, ಕೆರೆಗಳ ಪೂರ್ಣಮಟ್ಟದವರೆಗೆ ನೀರು ತುಂಬಿರುವುದರಿಂದ, ಇಲ್ಲಿ ಯಾವುದೇ ಕೆಲಸಗಳನ್ನು ಮಾಡುವುದು ಕಲ್ಪನೆಗೆ ಮೀರಿದ್ದಾಗಿದ್ದು, ಅವರು ಸ್ಥಳೀಯರಾಗಿದ್ದು ಯಾವುದೇ ಕೆರೆ ಅಭಿವೃದ್ಧಿ ಕೆಲಸಗಳಾಗಲೀ, ಚಟುವಟಿಕೆಗಳಾಗಲೀ ಕಂಡುಬಂದಿಲ್ಲವೆಂದು ಎದುರುದಾರರು ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

5. ದೂರಿನ ಮೇಲೆ ತನಿಖೆ ಮಾಡಿ ವರದಿ ನೀಡಲು ನಮ್ಮ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಕಳಿಸಿದ್ದು, ಅವರು ತಾಂತ್ರಿಕ ವಿಭಾಗದ ಸಹಾಯಕ ಅಭಿಯಂತರರು-1 ರವರಿಗೆ (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುವ) ಕಳಿಸಿದ್ದು, ದಿನಾಂಕ 06.07.2012ರಂದು ಸ್ಥಳ ಪರಿಶೀಲನೆ ಮಾಡಿ ಕೆರೆಗಳು ತುಂಬಿದ್ದು, ಕಾಮಗಾರಿಯನ್ನು ನಿರ್ವಹಿಸಿ 3 ವರ್ಷ ಕಳೆದುಹೋಗಿದ್ದು, ಸತತವಾಗಿ 3 ವರ್ಷಗಳು ಸಂಪೂರ್ಣವಾಗಿ ನೀರು ತುಂಬಿದ್ದುದರಿಂದ, ಹೂಳು ತೆಗೆದಿರುವುದರ ಬಗ್ಗೆ ಅಳತೆಗಳನ್ನು ಪರಿಶೀಲಿಸಲಾಗದ ಕಾರಣ, ಕೆರೆಗೆ ಹೊಂದಿಕೊಂಡಂತ ಜಮೀನುದಾರರಾದ ಶ್ರೀ ಮಲ್ಲಿಕಾರ್ಜುನ, ಶ್ರೀ ಶಿವಣ್ಣ, ಶ್ರೀ ಹೊನ್ನಪ್ಪಗೌಡ ಮತ್ತು ಶ್ರೀ ಖಾಜಾಹುಸೇನ್ ರವರ ಮೌಖಿಕ ಹೇಳಿಕೆ ಪ್ರಕಾರ ಕೆರೆಗಳ ಹೂಳು ತೆಗೆಯಲಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು, ದೂರುದಾರರ ಆಪಾದನೆ ಸಾಬೀತಾಗಿಲ್ಲವೆಂದು ದಿನಾಂಕ 11.02.2013ರಂದು ಎರಡೂ ಕೆರೆಗಳ ಬಗ್ಗೆ ಪ್ರಶ್ನಿತ ದೂರು ದಾಖಲಾಗಿದ್ದರೂ ಸಹ ಒಂದೇ ತನಿಖೆಯನ್ನಾಧರಿಸಿ ಕಂಪ್ಲೆಂಟ್/ಲೋಕ್/ಜಿಎಲ್‌ಬಿ-46/2010 ಮತ್ತು ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-27/2011ರಲ್ಲಿ ಪ್ರತ್ಯೇಕ ವರದಿ ನೀಡಿರುತ್ತಾರೆ.

6. ನಕರಾತ್ಮಕ ತನಿಖಾ ವರದಿಯನ್ನು ದೂರುದಾರರಿಗೆ ಕಳಿಸಿ, ಅವರ ಪ್ರತ್ಯುತ್ತರ ಕೇಳಲಾಗಿ, ಅವರು ಸದರಿ ಕೆರೆಗಳು ಸತತ 8 ವರ್ಷಗಳಿಂದ ಕೃಷ್ಣಾ ಬಲದಂಡೆ ಕಾಲುವೆ ಬಸಿ ನೀರಿನಿಂದ ತುಂಬಿದ್ದು, ಯಾವುದೇ ಕಾಮಗಾರಿ ನಿರ್ವಹಿಸಿಲ್ಲವೆಂತಲೂ, ತನಿಖಾಧಿಕಾರಿಗಳಿಗೆ ಗ್ರಾಮಸ್ಥರಾದ ಶ್ರೀ ಶಿವಣ್ಣ ತಂದೆ ಬಸಣ್ಣ, ಶ್ರೀ ಹೊನ್ನಪ್ಪಗೌಡ ತಂದೆ ಸಿದ್ರಾಮಣ್ಣ ಮತ್ತು ಖಾಜಾಹುಸೇನ್ ಸರಿಯಾದ ಮಾಹಿತಿ ನೀಡದೇ, ತಪ್ಪು ಮಾಹಿತಿ ನೀಡಿ ಅವರ ಹೇಳಿಕೆ

ಪಡೆದಿರುತ್ತಾರೆಂದು ಪುನ: ಅವರು ನೀಡಿದ ಜಂಟಿ ಹೇಳಿಕೆಯೊಂದಿಗೆ ಪ್ರತ್ಯುತ್ತರ ನೀಡಿದ್ದಿದೆ.

7. ಆದ್ದರಿಂದ, ಎದುರುದಾರರಿಗೆ ದೂರಿನ ಪ್ರತಿಯನ್ನು ಕಳಿಸಿ ಅವರ ಆಕ್ಷೇಪಣೆ ಕೇಳಲಾಗಿ, 1ನೇ ಎದುರುದಾರರು ತನಿಖಾಧಿಕಾರಿಗಳು ದಿನಾಂಕ 06.07.2012ರಂದು ಸ್ಥಳ ತನಿಖೆ ಮಾಡಿ ದಿನಾಂಕ 11.02.2013ರಂದು ನೀಡಿದ ತನಿಖಾ ವರದಿಯನ್ನು (ನಕಾರಾತ್ಮಕ ವರದಿ) ಸಮರ್ಥಿಸಿಕೊಳ್ಳುತ್ತಾ, ಕೆಲವು ಭಾವಚಿತ್ರಗಳನ್ನು ಕಳಿಸಿ, ತನಿಖೆಯನ್ನು ಕೈಬಿಡಬೇಕೆಂದು ಕೋರಿದ್ದಾರೆ. 2ನೇ ಎದುರುದಾರರು ಪ್ರಶ್ನಿತ ಕಾಮಗಾರಿ ಜುಲೈ-2009ರಲ್ಲಿ ಪೂರ್ಣಗೊಂಡಿದ್ದು, ತಾವು ದಿನಾಂಕ 10.05.2010ರಂದು ಅಧಿಕಾರ ವಹಿಸಿಕೊಂಡಿದ್ದು, ಕಾಮಗಾರಿಯ ನಿರ್ವಹಣೆ ಮತ್ತು ತನ್ನ ಅಧಿಕಾರಾವಧಿಯ ಅವಧಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ತಾವು ರಾಯಚೂರು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದ ಪ್ರಭಾರ ವಹಿಸಿಕೊಂಡ ಬಗ್ಗೆ ದಿನಾಂಕ 10.05.2010ರ ಅಧಿಸೂಚನೆಯನ್ನು ಹಾಜರುಪಡಿಸುತ್ತಾ, ತನ್ನ ವಿರುದ್ಧದ ತನಿಖೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

**8. ಕಡತವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡುಬರುವ ಅಂಶಗಳೆಂದರೆ:-**

(ಅ) ರಾಯಚೂರು ಜಿಲ್ಲಾ ಪಂಚಾಯಿತಿಯು ದಿನಾಂಕ 02.07.2009ರ ರ ಆದೇಶ ಸಂಖ್ಯೆ: ಜಿಪಂರಾ/ಸ.ಕೆರೆ/ಆಮಂ/2009-10ರನ್ವಯ 2008-09ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ದೇವದುರ್ಗ ತಾಲ್ಲೂಕಿನ ಗಲಗ ಕೆರೆ ಅಭಿವೃದ್ಧಿಗೆ ರೂ.30+15=45 ಲಕ್ಷಗಳನ್ನು, ಜಿನ್ನಾಪುರ ಕೆರೆ ಅಭಿವೃದ್ಧಿಗೆ ರೂ.30.00 ಲಕ್ಷವನ್ನು ಖರ್ಚು ಮಾಡಲು ಅನುಮೋದನೆ ನೀಡಿದೆ.

(ಆ) ಮೇಲೆ ಹೇಳಿದ ಆದೇಶಾನುಸಾರ ಗಲಗ ಅಭಿವೃದ್ಧಿ ಕೆರೆಗೆ ಕೆ.ಆರ್.ಐ.ಡಿ.ಎಲ್. ರವರು ರೂ.30+15 ಲಕ್ಷಗಳಿಗೆ ಭಾಗ-1 ಮತ್ತು ಭಾಗ-2 ಎಂದು, ಅನುಮೋದನೆಯ ಅಧಿಕಾರವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವ್ಯಾಪ್ತಿಗೆ ಪಡೆಯುವ ಒಂದೇ ಹೂಳೆತ್ತುವ ಕಾಮಗಾರಿಗಳಿಗೆ 2 ಅಂದಾಜು ಪತ್ರಿಕೆ ತಯಾರಿಸಿ ಅನುಮತಿ ಪಡೆದು, ಜಿನ್ನಾಪುರ ಕೆರೆ ಹೂಳೆತ್ತಲು ರೂ.30.00 ಲಕ್ಷಗಳ ಅಂದಾಜು ಪಟ್ಟಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದಿರುತ್ತಾರೆ.

(ಇ) ರಾಯಚೂರು ಜಿಲ್ಲಾ ಪಂಚಾಯತ್ ದಿನಾಂಕ 02.07.2009ರ ಆದೇಶಾನುಸಾರ ಅನುದಾನ ಬಿಡುಗಡೆ ಮಾಡಿದ್ದು, ಕರ್ನಾಟಕ ಸರ್ಕಾರವು ಸಂಖ್ಯೆ: ಗ್ರಾಅಪ:45: ಕೆರೆಗಳು:2009, ದಿನಾಂಕ 27.11.2009ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು ರವರಿಗೆ ಪತ್ರ ಬರೆದು ಕಾಮಗಾರಿಯನ್ನು ಅಂದಿನ ಕರ್ನಾಟಕ ಭೂಸೇನಾ ನಿಗಮಕ್ಕೆ (ಈಗಿನ ಕೆ.ಆರ್.ಐ.ಡಿ.ಎಲ್.) ನೇರವಾಗಿ ವಹಿಸಲು ಆದೇಶಿಸಿದೆ.
(ಈ) ಎದುರುದಾರರು ಕಾಮಗಾರಿಯನ್ನೇ ಮಾಡದೇ ರೂ.75.00 ಲಕ್ಷಗಳನ್ನು ಎತ್ತುವಳಿ ಮಾಡಿ ನಿರ್ದಿಷ್ಟವಾಗಿ ಯಾವ ದಿನಾಂಕದಂದು ಕಾಮಗಾರಿಯನ್ನು ಆರಂಭಿಸಿ, ಯಾವ ದಿನಾಂಕದಂದು ಮುಕ್ತಾಯಗೊಳಿಸಲಾಯಿತೆಂದು ಮಾಹಿತಿ ನೀಡದೇ, ತನಿಖಾ ವರದಿಯಲ್ಲಿರುವಂತೆ ಕಾಮಗಾರಿಯ ನಂತರ ಕೆರೆಗಳಲ್ಲಿ ಸತತವಾಗಿ ಮೂರು ವರ್ಷ ನೀರು ತುಂಬಿದ್ದು, ಪುನ: ಹೂಳು ತುಂಬಿಕೊಂಡಿದೆ ಎಂದು, ಮಾಹಿತಿ ಹಕ್ಕಿನಡಿ ದೂರುದಾರರಿಗೆ ನೀಡಿದ ಮಾಹಿತಿಗೆ ವಿರುದ್ಧವಾಗಿ ಸುಳ್ಳು ಪ್ರತಿಪಾದನೆ ಮಾಡಿದ್ದಾರೆ.
(ಉ) ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಎದುರುದಾರರು ಹೇಳುವಂತೆ ದೇವದುರ್ಗ ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗಳು 2007ರಿಂದ 2010ರವರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಸಿ ನೀರಿನಿಂದ ತುಂಬಿಕೊಂಡಿದ್ದು, ಅವುಗಳ ಹೂಳು ತೆಗೆಯುವುದು ಸಾಧ್ಯವಿಲ್ಲವೆಂದು ಗೊತ್ತಿದ್ದೂ ಸಹ 1ನೇ ಎದುರುದಾರರು(ಅ.ಸನೌ.) ಗಲಗ ಕೆರೆಯ ಹೂಳೆತ್ತಲು ನಿಯಮಬಾಹಿರವಾಗಿ ಗಲಗ ಕೆರೆಯ ಹೂಳೆತ್ತುವ ಕಾಮಗಾರಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತೆ ರೂ.30+15 ಲಕ್ಷ ರೂಪಾಯಿಗಳಿಗೆ 2 ಅಂದಾಜು ಪಟ್ಟಿಗಳನ್ನು ತಯಾರಿಸಿ, ಅನುಮೋದನೆ ಪಡೆದು, ಯಾವುದೇ ಹೂಳು ತೆಗೆಸದೆ ಸರ್ಕಾರಕ್ಕೆ ರೂ.75.00 ಲಕ್ಷಗಳ ವ್ಯರ್ಥ ವೆಚ್ಚಪಡಿಸಿರುತ್ತಾರೆ.
(ಊ) ರಾಯಚೂರು ಉಪವಿಭಾಗದ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದೂರುದಾರರಿಗೆ ಮಾಹಿತಿ ಹಕ್ಕಿನಡಿ ನೀಡಿದ ದಿನಾಂಕ 25.06.2010ರ ಮಾಹಿತಿಯ ಪ್ರಕಾರ ದೇವದುರ್ಗ ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಿಸಿನೀರು ಶೇಖರಣೆಯಾಗುತ್ತಿದ್ದು, ಅವು 2007–08ರಿಂದ 2009–10ರವರೆಗೆ ನೀರಿನ ಮಟ್ಟ ಮುಂದುವರಿಕೆ ಹೊಂದಿದ್ದು, ಅದರ ನೀರನ್ನು ಇದುವರೆಗೆ ತೆಗೆದು ಯಾವುದೇ ಕಾಮಗಾರಿ ನಿರ್ವಹಿಸಿಲ್ಲ ಎಂದು ಹೇಳಿರುತ್ತಾರೆ.

9. 1ನೇ ಎದುರುದಾರರು ಅಂದರೆ ಅ.ಸ.ನೌ. 2009ರಿಂದ 2014ರವರೆಗೆ ರಾಯಚೂರು ಕೆ.ಆರ್.ಐ.ಡಿ.ಎಲ್. ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಸಂಗತಿಯನ್ನು ಅಲ್ಲಗಳೆದಿಲ್ಲ. ಆದರೆ, 2ನೇ ಎದುರುದಾರರು ಕಾಮಗಾರಿಯ ಕಾಲಕ್ಕೆ ತಾನು ರಾಯಚೂರು ಕೆ.ಆರ್.ಐ.ಡಿ.ಎಲ್.ಗೆ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ದಿನಾಂಕ 10.05.2012ಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಪ್ರತಿಪಾದಿಸಿದ್ದು ಅಲ್ಲದೆ,

ಅವರು ದಿನಾಂಕ 31.07.2012ರಂದು ನಿವೃತ್ತಿ ಹೊಂದಿದ್ದು, ಅವರ ವಿರುದ್ಧ ಕ್ರಮತೆಗೆದುಕೊಳ್ಳಲು ಕರ್ನಾಟಕ ನಾಗರೀಕ ಸೇವಾ (ಸನ್ನಡತೆ) ನಿಯಮಗಳ 1966ರ ನಿಯಮ 214(2)(ಬಿ) ಅಡ್ಡಬರುತ್ತಿರುವ ಕಾರಣ, 2ನೇ ಎದುರುದಾರರ ವಿರುದ್ಧ ವರದಿ ಸಲ್ಲಿಸಿಲ್ಲ. ಆದರೆ, 1ನೇ ಎದುರುದಾರರು–ಅ.ಸ.ನೌ. ಇವರು ದೂರಿಗೆ ನೀಡಿದ ಆಕ್ಷೇಪಣೆಯು ಅವರ ವಿರುದ್ಧದ ತನಿಖೆಯನ್ನು ಕೈಬಿಡಲು ತೃಪ್ತಿ/ಸಮಾಧಾನಕರವಾಗಿಲ್ಲ.

10. 1ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಅವರ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ಹೊಂದದೇ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ನಿಯಮ 3 (1) (i) ರಿಂದ (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಗೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 14–ಎ ರನ್ವಯ 1ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ. ಅದರನ್ವಯ ಸರ್ಕಾರವು ಆದೇಶ ಮಾಡಿ ಪ್ರಸ್ತುತ ಅ.ಸ.ನೌರವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಿರುತ್ತದೆ. ಆದ್ದರಿಂದ ಈ ದೋಷಾರೋಪಣೆ.

=@=

The DGO has appeared on 7/11/2015 in pursuance to service of Article of charges.

Plea of DGO has been recorded and DGO has pleaded not guilty and he claimed for holding enquiry.

**The DGO has filed his written statement and submit that,**

The complaint is politically motivated, misconccivcd with an intention to extortion of money from the DGO by the complainant and is based on conjunction and surmises. The investigation conducted by the Technical Wing of Lokayukta the Asst. Engineer-1 Sri Pranesh, Karnataka Lokayukta, after his investigation has submitted report on 11/2/13 which has exonerated the DGO of all the allegations made by the complainant. There is no corrupt practice, deception by this DGO in handling the work and duties entrusted to him.

The complainant in his complaint has not specifically stated about date of knowledge of alleged irregularities which is mandatory to consider the said complaint for enquiry/investigation u/s 8 of the KLA Act. As such the complaint bad in law. In this case work were carried out during the year 2008-09 while complaint is dated 12/1/11 as the same is barred by limitation. Hon'ble Lokayukta without looking to the provisions act as proceeded to entrust the enquiry against the DGO to be conducted by this enquiry form is illegal and bad in law. The DGO denied the charge listed in the Article of charges framed against him. Hence, prayed for drop the charge leveled against him.

On behalf of the Disciplinary Authority, the complainant Sri Mallikarjun Police Patil, Agriculturist, Jinnapura, Raichur is examined as PW.1 and Ex.P1 to 9 are got marked. The DGO - Sri D. Krishnaraj has examined as Dw.1 and Ex.D1 & 2 are got marked.

The disciplinary authority and DGO have filed their written in brief and heard the submissions. I answer the above charge in **AFFIRMATIVE** against the DGO for the following:

## REASONS

3. It is the prime duty of the disciplinary authority to prove the charges substantially that are leveled against the DGO.

4. Disciplinary authority examined the complainant Sri Mallikarjun Police Patil, Agriculturist, Jinnapura, Raichur as Pw.1 and Ex.P1 to 9 are got marked. Pw.1 deposed in his Chief examination that, during the year 2007-08 desilting(ಹೂಳೆತ್ತುವುದು) of tank bed of Jinnapura village was not done for which the sanction was for Rs.30.00 lakh. Further he deposed that, he do not know whether desilting of Jinnapura tank was done or not. This witness turned hostile. But, in his cross examination made by the presenting officer, deposed that, "in the year 2007 an amount of Rs.30 lakh with respect to Jinnapura tank and 45 lakh with respect to Galag tank was shown to be expended by creating documents for desilting the said tank beds. The said two tank beds comes under the jurisdiction of Narayanapura left canal and for amounts 4 to 5 years 2 tank beds were silted due to the flow of water and the depositing of the material was not exonerated."

5. The Pw.1 further deposed in this cross examination made by the DGO side that "it is not true to suggest that as per the documents the work was completed in the year 2009. Witness voluntaries that for having not done the work, this complaint is filed. The DGO himself examined as Dw.1 not give any proper

explanation regarding the charge leveled against him in his chief examination and in his cross examination only denying the suggestion made by the presenting officer.

6. Perused the above oral evidence of Pw.1 and Dw.1 along with Ex.P1 to 9 and Ex.D1 and 2. As per the Ex.P1 complaint the complainant and other 20 villagers stated that the DGO created the documents regarding the alleged work of Rs.75 lakh and draw the amount without desilting of the tank bed of Jinnapura tank and Galag tank. Ex.P4 is the documents produced by the complainant Pw.1 along with his complaint it contain 55 sheets. In the said document the letter dt 3/7/10 issued by the Asst. Director, Karnataka Rural Infrastructure Development Ltd., Raichur to the complainant. As per the said documents the sanction amount for desilting the Jinnapura tank Devedurga taluk 30 lakh for the year 2008-09 the work done by the agency by name Karnataka Rural Infrastructure Development Ltd., Raichur (Karnataka Land Army Ltd.,) by commencement of the work shown as February 2009 completion of the work shown as March 2009 and utilize the entire amount ie., 30 lakh rupees. Along with the said letter furnished the some documents. The name of the work is improvements to tank at Jinnapura village in Devadurga taluk, Raichur district. As per the circular issued dt 6/3/09 by the Director of the Rural Infrastructure Development Department, 362 lakh released for development of tanks in Raichur district under minor irrigation. As per the Nanjundappa report for developments of small irrigation tanks, as per the government order No.ಗ್ರಾಪಕ 2/2 ಕೆರೆ08 ಬೆಂಗಳೂರು ದಿ:31/12/08 Rs.75 lakh amount of grant allotted for

Devadurga taluk. In the Ex.P4 there is a report of Karnataka Land Army Ltd., Raichur in the month of August 2009 regarding the progress of work in respect of developments of the small irrigation tanks. As per the said report in respect of the development of small irrigation tank in Devadurga taluk for the year 2008-09 Rs.75,000/- grant allotted. But, said amount not utilized and work is also not commenced, at the time of submitting said report. But, as per the above said letter 3/7/2010 by the Karnataka Rural Infrastructure Development Department, the said work was completed in the month of March itself. This fact also reveals that there is no work done by the DGO. In the said document in respect of the development work of Galag Tank divided the estimate amount as two part for Rs.15 lakh and 30 lakh but reason not given. And further the said department progress report of small irrigation tank in the month of September 2009 stated as the work in respect of the Galag Small irrigation tank part I part II and Jinnapura small irrigation tank development work completed. The above said report given by the same department created doubt regarding the actual work done.

7. The DGO not marked the document in respect of said work ie., MB books. But he produced the documents which are in the file. As per the documents produced by the DGO the measurement book written in respect of Jinnapura tank in the month of July 2009, in respect of Galag tank in the month of June 2009. These documents also created doubt regarding actual work done by the DGO. In Ex.P4 the letter dt 22/6/09 written by the Deputy Director, Karnataka Land Army Ltd.,

Raichur to the Chief Executive officer, ZP, Raichur. In the said letter stated as follows:

ದೇವದುರ್ಗ ತಾಲೂಕಿನಲ್ಲಿ ಜಿಲ್ಲಾ ಪಮಚಾಯತಿ ವ್ಯಾಪ್ತಿಯಲ್ಲಿ 2008–09ನೇ ಸಾಲಿನ ಲೆಕ್ಕ ಶಿರ್ಷಿಕೆ 4702ರ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಖಾನಾಪುರ ಗ್ರಾಮದ ಸಣ್ಣ ನೀರಾವರಿ ಕೆರೆಯ ಅಭಿವೃದ್ಧಿ ಕಾಮಗಾರಿಗಳಿಗೆ ರೂ.75 ಲಕ್ಷ ಮಂಜೂರಾಗಿದ್ದು ಸದರಿ ಕಾಮಗಾರಿಯನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ಈಗಾಗಲೆ ವಹಿಸಿಕೊಡಲಾಗಿದೆ 75 ಲಕ್ಷ ಹಣ ಕೂಡ ಬಿಡುಗಡೆಯಾಗಿರುತ್ತದೆ.

ಆದರೆ ಈಗ ಸದರಿ ಖಾನಾಪುರ ಸಣ್ಣ ನೀರಾವರಿ ಕೆರೆಯ ದುರಸ್ಥಿ ಕಾಮಗಾರಿಯನ್ನು ಬದಲಾಯಿಸಿ ಗಲಗ ಮತ್ತು ಜಿನ್ನಾಪುರ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸನ್ಮಾನ್ಯ ಶ್ರೀ ಶಿವನಗೌಡ ನಾಯಕ, ಗ್ರಂಥಾಲಯ, ಲೋಕ ಶಿಕ್ಷಣ, ಸಣ್ಣ ಉಳಿತಾಯ ಹಾಗೂ ಲಾಟರಿ ಸಚಿವರು ಕನಾಟಕ ಸರ್ಕಾರ, ಇವರು ಸೂಚಿಸಿದ್ದು, ಪತ್ರವನ್ನು ಕೂಡ ತಮಗೆ ನೀಡಿರುತ್ತಾರೆ.

ಆದುದರಿಂದ, ಸನ್ಮಾನ್ಯ ಸಚಿವರು ಸೂಚಿಸಿದಂತೆ ಖಾನಾಪೂರು ಸಣ್ಣ ನೀರಾವರಿ ಕೆರೆಯ ಬದಲಾಗಿ ಗಲಗ ಮತ್ತು ಜಿನ್ನಾಪುರ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಕ್ತ ಆದೇಶವನ್ನು ನೀಡುವಂತೆ ವಿನಂತಿಸಲಾಗಿದೆ. ಮೇಲಿನಂತೆ ಖಾನಾಪುರ ಸಣ್ಣ ನೀರಾವರಿ ಕೆರೆಯ ದುರಸ್ತಿ ಕಾಮಗಾರಿ ಪ್ರಾರಂಭಿಸಿರುವುದಿಲ್ಲ ಮತ್ತು ಯಾವುದೇ ವೆಚ್ಚನ್ನು ಭರಿಸಿರುವುದಿಲ್ಲ.

8. Considering this letter along with MB book produced DGO in this case and as per above said letter and report the work not commenced in the month of June, 2009. Hence, doubt created regarding the MB book prepared by the DGO in the month of June and July 2009 in respect of the said works.

9. Further, most important document in Ex.P4 are the endorsement issued by the AEE, Minor irrigation Sub Division, Raichur dated 25/6/10 and 28/1/10. In the said endorsement stated as follows:

In respect of Jinnapura tank

ವಿಷಯ: ಮಾಹಿತಿ ಹಕ್ಕು ಅಧಿನಿಯ 2005ರಡಿಯಲ್ಲಿ ದೇವದುರ್ಗ ಜಿನ್ನಾಪುರ 2007–08, 2008–09, 2009–10ನೇ ಸಾಲಿನಲ್ಲಿ ಕರೆಯಲ್ಲಿ ನೀರು ಸಂಗ್ರಹಿಸಿದ ವಿವರ ಹಾಗೂ ಕೆರೆಯಲ್ಲಿ ಯಾವಾಗಲಾದರೂ ಪೂರ್ಣವಾಗಿ ನೀರು ತೆಗೆದು ನಿರ್ವಹಿಸಿದ ಕೆಲಸದ ವಿವರ:

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದೇವದುರ್ಗ ತಾಲೂಕಿನ ಜಿನ್ನಾಪುರ ಕೆರೆಯ 2007–08, 2008–09, 2009–10ನೇ ಸಾಲಿನಲ್ಲಿ ಕರೆಯಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯಿಂದ ನೀರು ಬಸಿದು ಕೆರೆಯಲ್ಲಿ ನೀರಿನ ಮಟ್ಟ ಏರಿಕೆ ಹೊಂದಿರುತ್ತದೆ. ಆದರೆ ನೀರನ್ನು ಇದುವರೆಗೆ ತೆಗೆದು ಯಾವುದೇ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ. ಈ ಮಾಹಿತಿಯನ್ನು ತಮಗೆ ಮಾಹಿತಿ ಹಕ್ಕು ಅಧಿನಿಯಮದಡಿ ನೀಡಲಾಗಿದೆ.

In respect of Galag tank

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಹಾಗೂ ಉಲ್ಲೇಖದನ್ವಯ ದೇವದುರ್ಗ ತಾಲೂಕಿನಲ್ಲಿ ಬರುವ ಗಳಗ ಗ್ರಾಮ ಕೆರೆಯಲ್ಲಿ ಸುಮಾರು 5–6 ವರ್ಷಗಳಿಂದ ನಾರಾಯಣಪುರ ಬಲದಂಡೆ ಕಾಲುವೆಯಿಂದ ನೀರು ಬಸಿದು ನೀರು ಹೆಚ್ಚಳವಾಗಿರುತ್ತದೆ. ಸಂಗ್ರಹಿಸಿದ ನೀರನ್ನು 2007–08, 2008–09, 2009–10ರ ವರೆಗೆ ಖಾಲಿ ಮಾಡಿ ಯಾವುದೇ ಕಾಮಗಾರಿಗಳನ್ನು ಕೈಕೊಂಡಿಲ್ಲ ಈ ಮಾಹಿತಿಯನ್ನು ತಮಗೆ ಮಾಹಿತಿ ಹಕ್ಕಿನ ಅಧಿನಿಯಮದಡಿ ಒದಗಿಸಲಾಗಿದೆ.

10. Considering the above said two letters written by the AEE Minor Irrigation, Raichur along with Ex.D2 report submitted by the investigating officer. It is clearly reveals that water level of the said two tanks not decreased since from 2007-08 to 2009-10. Even at the time of inspection made by the I.O on 23/2/11. Investigating Officer also stated that, he unable to find out whether desilting the tank bed in the year 2009 or not. He only came to conclusion regarding desilting tank bed based on the 2 to 3 persons statement who were present at the time of draw the mahazar as per Ex.D1. Hence, statement of the said persons without examining on behalf of the DGO and without any particular documents regarding execution of the work, the Ex.D1 and 2 are not acceptable. There is sufficient evidence to show that, the DGO had misappropriated the fund granted regarding the desilting of the tank bed, development of the Jinnapura and Galag tank. There is no sufficient oral and documentary evidence from the side of the DGO to disprove the charge leveled against him. Considering the above document and evidence it is clear that the DGO without utilizing the amount allotted to the desilting of Jinnapura tank bed and Galag tank bed as per the estimation, was creating the documents without executing the said work and misappropriate the amount of Rs.75 lakh and caused loss to the state exchequer. Hence, he is responsible

for the same. The above said facts and circumstances clearly reveal that the DGO has failed to maintain absolute integrity devotion to duty and acted in the manner unbecoming of a government/public servant.

11. In the event of the circumstances, the charges leveled against the DGO is proved. Hence, this report is submitted to Hon'ble Upalokayukta-1 for further action.

( Lokappa N.R)
Additional Registrar Enquiries-9
Karnataka Lokayukta,
Bangalore.

**List of witnesses examined on behalf of Disciplinary Authority.**

| | |
|---|---|
| PW-1 | Sri Mallikarjun Police Patil, Agriculturist, Jinnapura, Raichur |

**List of Documents marked on behalf of Disciplinary Authority.**

| | |
|---|---|
| Ex.P1 | Written complaint dt 11/10/2010 of the complainant |
| Ex.P-2<br>Ex.P2(a) | Complaint form No.I<br>Signature of the complainant |
| Ex.P-3<br>Ex.P3(a) | Complaint form No.II<br>Signature of the complainant |
| Ex.P-4 | Documents enclosed to the complaint (58 sheets) |
| Ex. P-5<br>Ex.P5(a) | Letter dt 1/4/2011 written by the complainant to Lokayukta office regarding progress of investigation |

| | |
|---|---|
| | Signature of the complainant |
| Ex. P-6 & 7<br>Ex.P6(a)<br>Ex.P7(a) | Rejoinder dt 18/5/2013 of the complainant<br>Signature of the complainant<br>Signature of the complainant |
| Ex.P8 &9 | Two letters enclosed to the rejoinder |

**List of witnesses examined on behalf of DGO.**

| | |
|---|---|
| DW-1 | Sri D. Krishnaraj, Assistant Executive, Karnataka Rural Infrastructure Development Limited, Raichur |

**List of documents marked on behalf of DGO**

| | |
|---|---|
| Ex.D1 | Spot Mahazar dt 6/7/2012 |
| Ex.D2 | Investigation report dt 11/2/2013 |

( Lokappa N.R)
Additional Registrar Enquiries-9
Karnataka Lokayukta,
Bangalore

**GOVERNMENT OF KARNATAKA**

**KARNATAKA LOKAYUKTA**

NO: UPLOK-1/DE/440/2015/ARE-9

Multi Storied Building,
Dr. B.R. Ambedkar Veedhi,
Bengaluru-560 001,
Date: 12/12/2017

## RECOMMENDATION

Sub:- Departmental inquiry against Sri D. Krishnaraj, Assistant Executive Engineer, Karnataka Rural Infrastructure Development Limited, Raichur Division, Raichur.

Ref:- 1) Order No.ಕೆಆರ್ಐಡಿಎಲ್/ಆಡಳಿತ/ಸಿಆರ್-ಜಿನ್ನಾಪುರ-ಗಲಗಾ ಕೆರೆಗಳು/ **2015-16 ದಿನಾಂಕ 25/8/2015** of the Managing Director, Karnataka Rural Infrastructure Development Limited, Grameenabhivrudhi Bhavan, Ananda Rao Circle, Bengaluru.

2) Nomination order No.UPLOK-1/DE/440/2015, Bengaluru dated 2/9/2015 of Upalokayukta-1 State of Karnataka, Bengaluru

3) Inquiry Report dated 5/12/2017 of Additional Registrar of Enquiries-9, Karnataka Lokayukta, Bengaluru

----

The Managing Director, Karnataka Rural Infrastructure Development Limited, Grameenabhivruddhi Bhavan, Anandarao Circle, Bengaluru, by its order dated 25/8/2015 initiated disciplinary proceedings against Sri D. Krishnaraj, Assistant Executive Engineer, Karnataka Rural Infrastructure Development Limited, Raichur Division, Raichur (hereinafter referred to as Delinquent Government Official, for short as **'DGO'**) and entrusted the Departmental Inquiry to this Institution.

2. This Institution by Nomination Order No.UPLOK-1/DE/440/ 2015 dated 2/9/2015, nominated Additional Registrar of

Enquiries-5, Karnataka Lokayukta, Bengaluru, as Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently by order No. UPLOK-1/DE/2016 dated 3/8/2016, the Additional Registrar of Enquiries-9,Karnataka Lokayukta, Bengaluru was re-nominated as inquiry officer to conduct departmental inquiry against the DGO.

3. The DGO was tried for the following charge:-

"ಆ.ಸ.ನೌ. ಆದ ನೀವು ಡಿ.ಕೃಷ್ಣರಾಜ್ 2007ನೇ ಇಸವಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಯಚೂರು ಜಿಲ್ಲೆಯ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತ ರಾಯಚೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದೂರುದಾರರಾದ ಶ್ರೀ ಮಲ್ಲಿಕಾರ್ಜುನ ಪೊಲೀಸ್‌ಪಾಟೀಲ, ಜನ್ನಾಪುರ ಗ್ರಾಮ, ದೇವದುರ್ಗ ತಾಲ್ಲೂಕು ರಾಯಚೂರು ಜಿಲ್ಲೆ ಇವರು ನಿಮ್ಮ ಹಾಗೂ ಶ್ರೀ ಬಸವರಾಜ ವೀರಪ್ಪ ಚಿಕ್ಕನರಗುಂದ, ಉಪನಿರ್ದೇಶಕರು, ರಾಯಚೂರು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತ (2ನೇ ಎದುರುದಾರರು) ಇವರ ವಿರುದ್ಧ ದೂರು ಸಲ್ಲಿಸಿ ಆ ದೂರಿನಲ್ಲಿ, ನೀವು ಹಾಗೂ 2ನೇ ಎದುರುದಾರರು 2007ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆ ಪುನಶ್ಚೇತನ ಕಾಮಗಾರಿಗಳ ಅನುಷ್ಠಾನ, ದೇವದುರ್ಗ ತಾಲ್ಲೂಕ್ ಜನ್ನಾಪುರ ಕೆರೆಯನ್ನು ರೂ.30.00 ಲಕ್ಷಗಳ ಖರ್ಚಿನಲ್ಲಿ, ಗಲಗಾ ಗ್ರಾಮದ ಕೆರೆಯನ್ನು ರೂ.45.00 ಲಕ್ಷಗಳ ಖರ್ಚಿನಲ್ಲಿ ಅಭಿವೃದ್ಧಿಗೊಳಿಸಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿದ್ದು, ಆದರೆ, ಆ ಎರಡೂ ಕೆರೆಗಳು ನಾರಾಯಣಪುರ ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿದ್ದು, 4-5 ವರ್ಷಗಳಿಂದ ಈ ಎರಡೂ ಕೆರೆಗಳು ಬಸಿ ನೀರಿನಿಂದ ಸಂಪೂರ್ಣ ಭರ್ತಿಯಾಗಿದ್ದು, ಕೆರೆಗಳ ಪೂರ್ಣಮಟ್ಟದ ವರೆಗೆ ನೀರು ತುಂಬಿರುವುದರಿಂದ, ಇಲ್ಲಿ ಯಾವುದೇ ಕೆಲಸಗಳನ್ನು ಮಾಡುವುದು ಕಲ್ಪನೆಗೆ ಮೀರಿದ್ದಾಗಿದ್ದು, ಅವರು ಸ್ಥಳೀಯರಾಗಿದ್ದು, ಯಾವುದೇ ಕೆರೆ ಅಭಿವೃದ್ಧಿ ಕೆಲಸಗಳಾಗಲೀ, ಚಟುವಟಿಕೆಗಳಾಗಲೀ ಕಂಡು ಬಂದಿಲ್ಲವೆಂದು ನಿಮ್ಮ ಹಾಗೂ 2ನೇ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಮೇಲ್ಕಂಡ ದೂರಿನ ಮೇಲೆ ತನಿಖೆ ಮಾಡಿ ವರದಿ ನೀಡಲು ದೂರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಕಳಿಸಿದ್ದು ಅವರು ತಾಂತ್ರಿಕ ವಿಭಾಗದ ಸಹಾಯಕ ಅಭಿಯಂತರು-1 ರವರಿಗೆ ತನಿಖೆಗಾಗಿ ಕಳಿಸಿದ್ದು, ತನಿಖಾಧಿಕಾರಿಗಳು ದಿನಾಂಕ 06.07.2012ರಂದು ಸ್ಥಳ ಪರಿಶೀಲನೆ ಮಾಡಿ, ದೂರುದಾರರ ಮೇಲಿನ ಆಪಾದನೆ ಸಾಬೀತಾಗಿಲ್ಲವೆಂದು ದಿನಾಂಕ 11.02.2013ರಂದು ಎರಡೂ ಕೆರೆಗಳ ಬಗ್ಗೆ ಪ್ರಶ್ನಿತ ದೂರು ದಾಖಲಾಗಿದ್ದರೂ ಸಹ ಒಂದೇ ತನಿಖೆಯನ್ನಾಧರಿಸಿ ಕಂಪ್ಲೇಂಟ್/ಲೋಕ್/ಜಿಎಲ್‌ಬಿ-46/2010 ಮತ್ತು ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-27/2011ರಲ್ಲಿ ಪ್ರತ್ಯೇಕ ವರದಿ ನೀಡಿರುತ್ತಾರೆ. ನಂತರ ಈ ನಕಾರಾತ್ಮಕ ತನಿಖಾ ವರದಿಯನ್ನು ದೂರುದಾರರಿಗೆ ಕಳಿಸಿ, ಅವರ ಪ್ರತ್ಯುತ್ತರ

ಕೇಳಲಾಗಿ, ಅವರು ಸದರಿ ಕೆರೆಗಳು ಸತತ 8 ವರ್ಷಗಳಿಂದ ಕೃಷ್ಣಾ ಬಲದಂಡೆ ಕಾಲುವೆ ಬಸಿ ನೀರಿನಿಂದ ತುಂಬಿದ್ದು, ಯಾವುದೇ ಕಾಮಗಾರಿ ನಿರ್ವಹಿಸಿಲ್ಲವೆಂತಲೂ, ತನಿಖಾಧಿಕಾರಿಗಳಿಗೆ ಗ್ರಾಮಸ್ಥರಾದ ಶ್ರೀ ಶಿವಣ್ಣ ತಂದೆ ಬಸಣ್ಣ, ಶ್ರೀ ಹೊನ್ನಪ್ಪಗೌಡ ತಂದೆ ಸಿದ್ರಾಮಣ್ಣ ಮತ್ತು ಖಾಜಾಹುಸೇನ್ ಸರಿಯಾದ ಮಾಹಿತಿ ನೀಡದೇ, ತಪ್ಪು ಮಾಹಿತಿ ನೀಡಿ ಅವರ ಹೇಳಿಕೆ ಪಡೆದಿರುತ್ತಾರೆಂದು ಪುನಃ ಅವರು ನೀಡಿದ ಜಂಟಿ ಹೇಳಿಕೆಯೊಂದಿಗೆ ಪ್ರತ್ಯುತ್ತರ ನೀಡಿರುತ್ತಾರೆ. ಈ ಕಡತದಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

(i) ರಾಯಚೂರು ಜಿಲ್ಲಾ ಪಂಚಾಯಿತಿಯು ದಿನಾಂಕ 02.07.2009ರ ಆದೇಶ ಸಂಖ್ಯೆ ಜಿಪಂರಾ/ಸ.ಕೆರೆ/ಆಮಂ/2009-10ರನ್ವಯ 2008-09ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ 4702ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ದೇವದುರ್ಗ ತಾಲ್ಲೂಕಿನ ಗಲಗ ಕೆರೆ ಅಭಿವೃದ್ಧಿಗೆ ರೂ.30+15=45ಲಕ್ಷಗಳನ್ನು, ಜಿನ್ನಾಪುರ ಕೆರೆ ಅಭಿವೃದ್ಧಿಗೆ ರೂ.30.00 ಲಕ್ಷಗಳನ್ನು ಖರ್ಚು ಮಾಡಲು ಅನುಮೋದನೆ ನೀಡಿರುತ್ತದೆ.

**(ii)** ಮೇಲೆ ಹೇಳಿದ ಆದೇಶಾನುಸಾರ ಗಲಗ ಅಭಿವೃದ್ಧಿ ಕೆರೆಗೆ ಕೆ.ಆರ್.ಐ.ಡಿ.ಎಲ್ ರವರು ರೂ.30+15 ಲಕ್ಷಗಳಿಗೆ ಭಾಗ-1 ಮತ್ತು ಭಾಗ-2 ಎಂದು, ಅನುಮೋದನೆಯ ಅಧಿಕಾರವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವ್ಯಾಪ್ತಿಗೆ ಪಡೆಯುವ ಒಂದೇ ಹೂಳೆತ್ತುವ ಕಾಮಗಾರಿಗಳಿಗೆ 2 ಅಂದಾಜು ಪತ್ರಿಕೆ ತಯಾರಿಸಿ ಅನುಮತಿ ಪಡೆದು, ಜಿನ್ನಾಪುರ ಕೆರೆ ಹೂಳೆತ್ತಲು ರೂ.30.00 ಲಕ್ಷಗಳ ಅಂದಾಜು ಪಟ್ಟಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದಿರುತ್ತಾರೆ.

**(iii)** ರಾಯಚೂರು ಜಿಲ್ಲಾ ಪಂಚಾಯಿತ್ ದಿನಾಂಕ 02.07.2009ರ ಆದೇಶಾನುಸಾರ ಅನುದಾನ ಬಿಡುಗಡೆ ಮಾಡಿದ್ದು, ಕರ್ನಾಟಕ ಸರ್ಕಾರವು ಸಂಖ್ಯೆ ಗ್ರಾಅಪ 45 ಕೆರೆಗಳು 2009 ದಿನಾಂಕ 27.11.2009ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಯಚೂರು ರವರಿಗೆ ಪತ್ರ ಬರೆದು ಕಾಮಗಾರಿಯನ್ನು ಅಂದಿನ ಕರ್ನಾಟಕ ಭೂಸೇನಾ ನಿಗಮಕ್ಕೆ (ಈಗಿನ ಕೆ.ಆರ್.ಐ.ಡಿ.ಎಲ್) ನೇರವಾಗಿ ವಹಿಸಲು ಆದೇಶಿಸಿದೆ.

**(iv)** ಎದುರುದಾರರು, ಕಾಮಗಾರಿಯನ್ನೇ ಮಾಡದೇ ರೂ.75.00 ಲಕ್ಷಗಳನ್ನು ಎತ್ತುವಳಿ ಮಾಡಿ ನಿರ್ದಿಷ್ಟವಾಗಿ ಯಾವ ದಿನಾಂಕದಂದು ಕಾಮಗಾರಿಯನ್ನು ಆರಂಭಿಸಿ, ಯಾವ ದಿನಾಂಕದಂದು ಮುಕ್ತಾಯಗೊಳಿಸಲಾಯಿತೆಂದು ಮಾಹಿತಿ ನೀಡದೇ, ತನಿಖಾ ವರದಿಯಲ್ಲಿರುವಂತೆ ಕಾಮಗಾರಿಯ ನಂತರ ಕೆರೆಗಳಲ್ಲಿ ಸತತವಾಗಿ ಮೂರು ವರ್ಷ ನೀರು ತುಂಬಿದ್ದು, ಪುನ: ಹೂಳು ತುಂಬಿಕೊಂಡಿದೆ ಎಂದು ಮಾಹಿತಿ ಹಕ್ಕಿನಡಿ ದೂರುದಾರರಿಗೆ ನೀಡಿದ ಮಾಹಿತಿಗೆ ವಿರುದ್ಧವಾಗಿ ಸುಳ್ಳು ಪ್ರತಿಪಾದನೆ ಮಾಡಿದ್ದಾರೆ.

(v) ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ನೀವು ಹಾಗೂ 2ನೇ ಎದುರುದಾರರು ಹೇಳುವಂತೆ ದೇವದುರ್ಗ ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗಳು 2007ರಿಂದ 2010ರವರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಸಿ ನೀರಿನಿಂದ ತುಂಬಿಕೊಂಡಿದ್ದು, ಅವುಗಳ ಹೂಳು ತೆಗೆಯುವುದು ಸಾಧ್ಯವಿಲ್ಲವೆಂದು ಗೊತ್ತಿದ್ದೂ ಸಹ 1ನೇ ಎದುರುದಾರರು (ಆ.ಸ.ನೌ) ಗಲಗ ಕೆರೆಯ ಹೂಳೆತ್ತಲು ನಿಯಮಬಾಹಿರವಾಗಿ ಗಲಗ ಕೆರೆಯ ಹೂಳೆತ್ತುವ ಕಾಮಗಾರಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹ ಅಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತೆ ರೂ.30+15 ಲಕ್ಷ ರೂಪಾಯಿಗಳಿಗೆ 2 ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆ ಪಡೆದು ಯಾವುದೇ ಹೂಳು ತೆಗೆಸದೆ ಸರ್ಕಾರಕ್ಕೆ ರೂ.75.00 ಲಕ್ಷಗಳ ವ್ಯರ್ಥ ವೆಚ್ಚಪಡಿಸಿರುತ್ತೀರಿ.

(vi) ರಾಯಚೂರು ಉಪವಿಭಾಗದ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ದೂರುದಾರರಿಗೆ ಮಾಹಿತಿಹಕ್ಕಿನಡಿ ನೀಡಿದ ದಿನಾಂಕ 25.06.2010ರ ಮಾಹಿತಿಯ ಪ್ರಕಾರ ದೇವದುರ್ಗ ತಾಲ್ಲೂಕಿನ ಗಲಗ ಮತ್ತು ಜಿನ್ನಾಪುರ ಕೆರೆಗೆ ನಾರಾಯಣಪುರ ಬಲದಂಡೆ ಕಾಲುವೆಯ ಬಸಿ ನೀರು ಶೇಖರಣೆಯಾಗುತ್ತಿದ್ದು, ಅವು 2007-08ರಿಂದ 2009-10ರವರೆಗೆ ನೀರಿನ ಮಟ್ಟ ಮುಂದುವರಿಕೆ ಹೊಂದಿದ್ದು, ಅದರ ನೀರನ್ನು ಇದುವರೆಗೆ ತೆಗೆದು ಯಾವುದೇ ಕಾಮಗಾರಿ ನಿರ್ವಹಿಸಿಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಆ.ಸ.ನೌ ಆದ ನೀವು ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಮತ್ತು ನಿಷ್ಠೆ ಹೊಂದದೆ ಸಾರ್ವಜನಿಕ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ 3(1) (i)ರಿಂದ (iii)ರ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುವುದರಿಂದ, ಈ ದೋಷಾರೋಪಣೆಯನ್ನು ಹೊರಿಸಲಾಗಿದೆ.

4. The Inquiry Officer (Additional Registrar of Enquiries-9) on proper appreciation of oral and documentary evidence has held that the Disciplinary Authority has held that the Disciplinary Authority has proved the above charge against DGO Sri D. Krishnaraj, Assistant Executive Engineer, Karnataka Rural Infrastructure Development Limited, Raichur. The Inquiry officer has held that the DGO without utilizing the amount allotted to the desilting of Jinnapura Tank bed and Galag Tank bed as per the estimation, has created documents without executing the work and misappropriated the amount of Rs.75.00 lakhs and caused loss to the State Exchequer.

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he has retired from service on 31/8/2016.

7. Having regard to the nature of charge proved against DGO Sri D. Krishnaraj and the amount of Rs.75.00 Lakhs misappropriated by DGO, it is hereby recommended to the Government to impose penalty of recovering a sum of Rs.75.00 Lakhs from DGO Sri D. Krishnaraj, the then Assistant Executive Engineer, Karnataka Rural Infrastructure Development Limited, Raichur Division, Raichur from the pension and other allowances payable to DGO.

8. Action taken in the matter shall be intimated to this Authority.

Connected records are enclosed herewith.

N. Ananda 12/12/...

**(JUSTICE N. ANANDA)**
Upalokayukta-1,
State of Karnataka,
Bengaluru